# ಶಾಂತಿಯ ಬದುಕಿಗೆ ಹಚ್ಚಿಟ್ಟ ಕೈದೀಪ

**ವಿಜಯಭಾರತಿ**

## ಸಿಂಧುವಾಗಿದ್ದು ಬಿಂದುವಾಗಿರುವುದು


ಎಲ್ಲಿ ಯಾವ ಬಿರುಕೂ, ಬೆರಕೆಯೂ ಇಲ್ಲವೋ ಅದೇ ನಿಜವಾದ ಮಾನವ ಜೀವನ. ಹಿಂದಿನ ಕಾಲದಲ್ಲಿ ಅಂತಹ ಜೀವನ ಕಾಣಬರುತ್ತಿದ್ದು, ಇಂದು ಕಡಮೆಯಾಗುತ್ತಾ ಹೋಗಿರುವುದು ಅತ್ಯಂತ ಶೋಚನೀಯವಾದ ವಿಷಯ. ಪದವಿಗಾಗಿ ಗುದ್ದಾಟ, ಹಣಕ್ಕಾಗಿ ಸೆಣಸಾಟ, ಭೋಗ ಜೀವನದ ಬಂಗಾರದ ಜಿಂಕೆಯ ಹಿಂದೆ ಓಡುವ ಹುಚ್ಚಾಟ, ಎಲ್ಲೆಲ್ಲೂ ತೋರಿಕೆಯ ಡೊಂಬರಾಟ, ಕೃತಕತೆಯ ಕೊಚ್ಚೆರಾಡಿ, ಸ್ವಾರ್ಥಸಾಧನೆಗಾಗಿ ಹಾಕಿಕೊಂಡ ನಯವಂಚನೆಯ ಮುಖವಾಡ, ಇಂಗಿ ಹೋದ ವಿವೇಕ, ಬೂಷ್ಟು ಹಿಡಿದ ವಿವೇಚನೆ – ಈ ಎಲ್ಲ ಸಿಕ್ಕುಗೋಜಲಿನ ನಡುವೆ ಆಗೊಮ್ಮೆ ಈಗೊಮ್ಮೆ, ಅಲ್ಲಿಷ್ಟು ಇಲ್ಲಿಷ್ಟು ಉದುರುವ ಮಾನವೀಯತೆಯ ಒಂದಿಷ್ಟೇ ಹನಿಗಳು ನಮ್ಮ ಅದೃಷ್ಟ.

**ಅಯ್ಯೋ! ಸಿಂಧುವಾಗಿದ್ದುದು ಬಿಂದುಗಳಾಗಿವೆಯೆ! ಇದನ್ನು ಮತ್ತೆ ಸಿಂಧುವಾಗಿ ಮಾಡುವುದು ಹೇಗೆ?**

## ವಿಶ್ವಪ್ರೇಮದ ಸಂಜೀವಿನಿ

ಈ ಎಲ್ಲ ತಾಕಲಾಟಕ್ಕೂ ತೊಳಲಾಟಕ್ಕೂ ಏಕೈಕ ಪರಿಹಾರ "ವಿಶ್ವಪ್ರೇಮ." ಸತ್ತುಹೋದಂತಿರುವ ಮಾನವೀಯತೆಗೆ ಮತ್ತೆ ಜೀವದಾನ ಮಾಡುವ ಸಂಜೀವಿನಿ ಇದೊಂದೆ! ವಿಶ್ವಪ್ರೇಮ ಹರಿಯುವುದೇ ವಿಶಾಲಹೃದಯದಿಂದ. ಆ ಹೃದಯದಲ್ಲಿ ಸಹಜತೆ ಇದೆ, ಸರಳತೆ ಇದೆ, ಪರಿಶುದ್ಧತೆ ಇದೆ. ಪ್ರೀತಿ ಸ್ನೇಹಗಳ ರಸಾರ್ದ್ರ ಭಾವವಿದೆ, ವಿವೇಕದ ಹೊಳಪಿದೆ. ಛಾಂದೋಗ್ಯ ಉಪನಿಷತ್ತಿನ **"ಯೋ ವೈ ಭೂಮಾ ತತ್ಸುಖಂ ನ ಅಲ್ಪೇ ಸುಖಮಸ್ತಿ"** – (ಯಾವುದು ದೊಡ್ಡದೋ ಅದರಲ್ಲಿ ಮಾತ್ರ ಸುಖವಿದೆ, ಅಲ್ಪವಾದುದರಲ್ಲಿ ಸುಖವಿಲ್ಲ) ಎಂಬ ಸೂಕ್ತಿಯಲ್ಲಿ ನಿಶ್ಚಲ ತತ್ತ್ವವಡಗಿದೆ.

ಗುರು ಹಿರಿಯರೆನಿಸಿಕೊಂಡವರಲ್ಲಿಯೇ ಗುರುತನ, ಹಿರಿತನ ಮರೆಯಾಗುತ್ತಾ ಹೋದರೆ ಕಿರಿಯರಿಗೆ ಹಿರಿದಾದುದನ್ನಿತ್ತು ಹರಸುವವರು ಯಾರು? ಅದೇ ಇಂದಿನ ವಿಪರ್ಯಾಸ! ಎಲ್ಲೆಲ್ಲೂ ವ್ಯಾಪಾರಿಬುದ್ಧಿಯೇ ವ್ಯಾಪಿಸಿಕೊಂಡರೆ ವಾತ್ಸಲ್ಯಕ್ಕೆ ತಾಣವೆಲ್ಲಿ? ಹೀಗಾಗಿ, ಈಗಿನ ಸಂದಿಗ್ಧ ಕಾಲದಲ್ಲಿ, ನಮ್ಮ ನಿಜವಾದ ಬೆಲೆ ಹಾಗೂ ನೈಜ ನೆಲೆ ಸ್ಥಿರವಾಗುವುದು ಮಾತೃಪ್ರೇಮದ ಭದ್ರ ಬುನಾದಿಯ ಮೇಲೆ ಮಾತ್ರ. ಶ್ರೀರಾಮಕೃಷ್ಣ ಶಕ್ತಿಸಂಚಾಲನದ ಮಹಾತರಂಗವೇ ಆ ಮಾತೃತರಂಗ! ಆ ವಿಶ್ವಮಾತೃತ್ವದ ಮೂರ್ತರೂಪವೇ ಶ್ರೀಮಾತೆ ಶಾರದಾದೇವಿ!



ಸೋದರಿ ನಿವೇದಿತಾ ಹೇಳಿರುವಂತೆ ಮಾನವಕೋಟಿಯ ಕಲ್ಯಾಣಕ್ಕಾಗಿ ಶ್ರೀರಾಮಕೃಷ್ಣ ಪರಮಹಂಸರು ಇರಿಸಿಹೋದ ಅಮೃತಕಲಶ ಶ್ರೀಮಾತೆಯವರು. **ಅವರ ಬದುಕಿನಲ್ಲಿ ಕಾಣುವ ವಿಶೇಷವೇನೆಂದರೆ ಮಾನವೀಯತೆಯ ಚೌಕಟ್ಟಿನಲ್ಲಿ ಕಾಣುವ ಚಿರಂತನ ದೈವಿಕತೆ.** ಅವರ ಮಮತೆಯ ಮಡಿಲಿನಿಂದ ಹೊರಗುಳಿದದ್ದು ಯಾವುದೂ ಇಲ್ಲ, ಅವರ ವಾತ್ಸಲ್ಯದ ಸಿಂಚನದಿಂದ ದೂರವಾದವರು ಯಾರೂ ಇಲ್ಲ. ಸ್ವಾಮಿ ಯೋಗಾನಂದರಿಂದ ಡಕಾಯಿತ ಅಮ್‌ಜಾದ್‌ನವರೆಗೆ ಎಲ್ಲರೂ ಅವರ ಮಡಿಲಿನಲ್ಲಿ ಇದ್ದರು. ಹಿಂದೂಧರ್ಮದ ಸಂಪ್ರದಾಯನಿಷ್ಠ ಗೌರಿಮಾ ಅಲ್ಲಿದ್ದರು, ವಿದೇಶೀ ಮಹಿಳೆ ಮಾರ್ಗರೆಟ್ ನೋಬೆಲ್(ನಿವೇದಿತಾ) ಕೂಡ ಅವರ ಮಾತೃತ್ವದ ಮಾಂತ್ರಿಕತೆಯ ಸೆಳೆತಕ್ಕೆ ಒಳಗಾಗಿದ್ದರು. ಪ್ರಾಪಂಚಿಕರಲ್ಲಿ ಪ್ರಾಪಂಚಿಕರಾದ ಶ್ರೀಮಾತೆಯವರ ಸ್ವಂತ ಸೋದರರೂ ಇದ್ದರು. ವಿದ್ಯಾವಂತರು, ಕಲಾವಿದರು, ಶ್ರೀಮಂತರು, ಭಿಕ್ಷುಕರು, ಕುಡುಕರು, ಕೂಲಿಕಾರರು, ದೇಶಪ್ರೇಮಿಗಳು, ಯುವಕರು, ಬಾಲಕರು, ವೃದ್ಧರು, ಯತಿಗಳು, ಗೃಹಸ್ಥರು – ಈ ಸಾಲುಗಳಿಗೆ ಮಿತಿಯುಂಟೆ? ಎಲ್ಲರೂ ಆ ಮಹಾವೃಕ್ಷದಡಿಯಲ್ಲಿ ಆಶ್ರಯ ಪಡೆದವರೇ! ಶ್ರೀಮಾತೆಯವರು ಕಿರಿದಾದ ಒಂದು ಕೋಣೆಯಲ್ಲಿ ಹಿರಿದಾದ ಬಾಳನ್ನು ಬಾಳಿದರು; ಸ್ವತಃ ಅನಕ್ಷರಸ್ಥರಾದರೂ ವಿದ್ಯಾವಂತರಿಗೂ ಜ್ಞಾನ ನೀಡಿದರು; ಮೆಲುಮಾತಿನಲ್ಲೇ ಅಜ್ಞಾನಿಗಳ ಅಜ್ಞಾನದ ಪದರ ಕಳಚಿದರು; ತಮ್ಮ ಸಾಮಾನ್ಯ ದಿನಚರಿಯಲ್ಲಿ ಅಸಾಮಾನ್ಯತೆಯನ್ನು ತೋರಿದರು.

### ಹಿರಿದಾದ ದೊಡ್ಡಸ್ತಿಕೆಯಲ್ಲಿ ಕಿರಿದಾದ ಬದುಕು

ಇಂದಿನ ನಮ್ಮ ಬದುಕು ಇದಕ್ಕೆ ತದ್ವಿರುದ್ಧವಾಗಿದೆ. ಹಿರಿದಾದ ವಾಸಸ್ಥಾನದಲ್ಲಿ ಕಿರಿದಾದ ಬದುಕು, ಅಕ್ಷರಸ್ಥರಾದರೂ ಅಜ್ಞಾನದ ಕತ್ತಲು. ಮಾತಿನ ಮಂಡಿಗೆಯಲ್ಲೆ ಎಲ್ಲ ಮುಗಿದು ಹೋಗುತ್ತದೆ. ಕೃತಿ ಸೊನ್ನೆ!

ಎಲ್ಲದರಲ್ಲಿ ಹೇಗೆಂದರೆ ಹಾಗೆ ಮನಸ್ಸನ್ನು ಹರಿಯಬಿಡುತ್ತಿದ್ದ ಭಕ್ತನೊಬ್ಬನನ್ನು ಶ್ರೀಮಾತೆ ಸಂತೈಸುತ್ತಾರೆ: “ನೀರಿನ ಸ್ವಭಾವ ಕೆಳಗೆ ಹರಿಯುವುದಾದರೂ ಸೂರ್ಯನ ಕಿರಣ ಅದನ್ನು ಮೇಲಕ್ಕೆ ಸೆಳೆಯುತ್ತದೆ” ಎಂಬುದಾಗಿ. ಈ ಮಾತು ಇಂದಿನ ಪ್ರತಿಕೂಲ ಸ್ಥಿತಿಗೆ “ಮಾಸ್ಟರ್ ಕೀ”. ಒಂದಲ್ಲ ಒಂದು ಆಮಿಷಕ್ಕೆ ಒಳಗಾಗಿ ಕೆಳಗಿಳಿವ ಮನಸ್ಸಿನ ಸಹಾಯಕ್ಕೆ ವಿವೇಕದ ಸೂರ್ಯ ಇರಬೇಕು. ಆಗ ಮಾತ್ರ ಮನಸ್ಸನ್ನು ವಿವೇಕದ ಕಿರಣಗಳು ಮೇಲೆಳೆಯುತ್ತವೆ.

ಹಿರಿಯ ಅಧಿಕಾರಿಯೊಬ್ಬರ ಭಾಷಣದ ವಿಷಯವನ್ನು ಕೇಳಿದಾಗ ಶ್ರೀಮಾತೆ ಹೇಳುತ್ತಾರೆ: “ಅವನ ಮಾತು ಬರೀ ಬಾಯಿ ಮಾತಷ್ಟೆ, ಹೃದಯದಿಂದ ಬಂದುದಲ್ಲ.” ಒಳಗೊಂದು ಹೊರಗೊಂದು ಆಡುವವರಿಗೆ ಈ ಮಾತು ಸರಿದಾರಿ ತೋರುವಂತಹುದಾಗಿದೆ.

> **ಹಣ ಯಾವಾಗಲೂ ಮನಸ್ಸನ್ನು ಮಲಿನಗೊಳಿಸುತ್ತದೆ. ಹಣದ ಆಕರ್ಷಣೆ ಎಂತಹದೆಂದರೆ ನೀನು ಅದರ ವ್ಯವಹಾರದಲ್ಲಿ ತೊಡಗಿದಷ್ಟೂ ಅದರಲ್ಲಿ ಸಿಕ್ಕಿಕೊಳ್ಳುತ್ತ ಹೋಗುತ್ತೀಯೆ. ನಿನಗೆ ಅದರ ಕಡೆ ಆಕರ್ಷಣೆಯೇ ಇಲ್ಲ ಎಂದು ನೀನು ಭಾವಿಸಬಹುದು; ಅದನ್ನು ಯಾವ ಕ್ಷಣದಲ್ಲಾದರೂ ಬಿಟ್ಟು ಹೋಗಲು ಸಿದ್ಧ ಎಂದೂ ನೀನು ಭಾವಿಸಬಹುದು. ಆದರೆ, ಮಗು, ಹಾಗೆ ಎಂದೂ ಅಂದುಕೊಳ್ಳಬೇಡ. ಅದು ಯಾವುದೋ ಸಣ್ಣಮೂಲೆಯಿಂದ ನಿನ್ನ ಮನಸ್ಸನ್ನು ಹೊಕ್ಕು ನಿನಗೇ ಗೊತ್ತಾಗದಂತೆ ನಿನ್ನನ್ನು ಕಟ್ಟಿಹಾಕಬಹುದು... ಶ್ರೀರಾಮಕೃಷ್ಣರು ಹಣದ ಸ್ಪರ್ಶವನ್ನೇ ಸಹಿಸುತ್ತಿರಲಿಲ್ಲ.... ಅವರ ಮಾತನ್ನು ಯಾವಾಗಲೂ ನೆನಪಿನಲ್ಲಿಟ್ಟುಕೋ. ಪ್ರಪಂಚದಲ್ಲಿ ನೀನು ಕಾಣುವ ಅನಾಹುತಗಳಿಗೆಲ್ಲಾ ಹಣವೇ ಕಾರಣ. ಅಲ್ಲದೇ ಹಣ ಇನ್ನಿತರ ಪ್ರಲೋಭನೆಗಳನ್ನೂ ಉಂಟುಮಾಡಬಹುದು. ಎಚ್ಚರ !**
>
> – *ಶ್ರೀಶಾರದಾದೇವಿ*

ನಿನ್ನ ಸುತ್ತಲಿರುವವರನ್ನು ಪ್ರೀತಿಸಿದರೆ, ನನ್ನನ್ನು ಪ್ರೀತಿಸಿದಂತೆಯೇ ಎಂದು ಶ್ರೀಮಾತೆ ಆಗಾಗ ಹೇಳುತ್ತಿದ್ದರು. ಅದು ನಮ್ಮೆಲ್ಲರಿಗೂ ಅನ್ವಯವಾಗುತ್ತದೆ. ಕುಡುಕ ಪದ್ಮವಿನೋದ ಅಮಲಿನಲ್ಲಿ ಹಾಡುತ್ತಾ ಅವರ ದರ್ಶನಕ್ಕಾಗಿ ಪ್ರಾರ್ಥಿಸಿದಾಗ, ಅವರು ನಡುರಾತ್ರಿಯಲ್ಲಿ ಕಿಟಕಿ ತೆರೆದು ಅಲ್ಲಿಂದಲೇ ದರ್ಶನ ನೀಡಿದರು. ಶುದ್ಧ ಮನಸ್ಸಿದ್ದರೆ, ಏನನ್ನಾದರೂ ಎಷ್ಟು ಕಷ್ಟವಾದದ್ದಾದರೂ ಸಾಧಿಸಬಹುದು ಎಂಬುದು ಅವರ ನಂಬಿಕೆಯಾಗಿತ್ತು. ಅವರ ಕುಟೀರದಲ್ಲಿ ಊಟ ಮಾಡಿದ ದೀಕ್ಷೆ ಪಡೆದ ಭಕ್ತರಿಗಾಗಲೀ, ಹಸಿದು ಬಳಲಿಬಂದ ಬಡವರಿಗಾಗಲೀ ಎಲ್ಲರಿಗೂ ಅವರು ಪ್ರೀತಿಯಿಂದ ಉಣಬಡಿಸಿದ್ದರು. ಭೇದ ಭಾವದ ಸೋಂಕಿಲ್ಲದ ಈ ಬಗೆಯ ಎಷ್ಟೋ ಕಾರ್ಯಗಳು ಅವರ ವಿಶಾಲ ಹೃದಯಕ್ಕೆ ಸಾಕ್ಷಿಯಾಗಿವೆ.

### ಮಾನವೀಯತೆಯ ಸಂರಕ್ಷಣೆ, ದೈವಿಕತೆಯ ಜಾಗೃತಿ

ಶ್ರೀಮಾತೆಯವರನ್ನು ಕುರಿತು, “ಇವರು ಪ್ರಾಚೀನತೆಯ ಅಂತಿಮ ಅಧ್ಯಾಯವೇ ಅಥವಾ ಆಧುನಿಕತೆಯ ಪ್ರಥಮ ಅಧ್ಯಾಯವೇ?” ಎಂಬ ಸೋದರಿ ನಿವೇದಿತಾ ಅವರ ಉದ್ಗಾರ ತುಂಬ ಅರ್ಥಗರ್ಭಿತವಾಗಿದೆ. ಶ್ರೀಶಾರದಾದೇವಿಯವರು ಇವೆರಡರ ಅಪೂರ್ವ ಸಂಗಮವಾಗಿದ್ದರು. ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಇಲ್ಲಿಯೇ ಇದೆ. ನಾವು ನಮ್ಮ ಹಿಂದಿನವರು ಬಾಳಿದ ಮೌಲ್ಯಯುತವಾದ ಬಾಳಸಾರವನ್ನು ನಮ್ಮದಾಗಿಸಿಕೊಂಡು, ಇಂದಿನ ಪರಿಸರಕ್ಕನುಗುಣವಾಗಿ ಅದನ್ನು ನಾವು ಅಳವಡಿಸಿಕೊಂಡರೆ, ಮಾನವೀಯತೆಯ ಸಂರಕ್ಷಣೆ, ದೈವಿಕತೆಯ ಜಾಗೃತಿ ಎರಡೂ ಏಕಕಾಲದಲ್ಲಾಗುತ್ತದೆ.

“ಯಾರಲ್ಲೂ ದೋಷ ಕಾಣದೆ ಎಲ್ಲರನ್ನೂ ನಿನ್ನವರನ್ನಾಗಿ ಕಾಣು” ಎಂಬ ಅವರ ಅಂತಿಮ ಬೋಧೆಯಲ್ಲಿಯೇ **‘ವಸುಧೈವ ಕುಟುಂಬಕಂ’** (ಇಡೀ ಪ್ರಪಂಚವೇ ನಮ್ಮ ಕುಟುಂಬ) ಎಂಬ ವಿಶಾಲ ಅರ್ಥದ ಸ್ಫುರಣೆ ಇದೆ. ಸಮಾಜದಲ್ಲಿ ನಿಜವಾದ ಪರಿವರ್ತನೆಯನ್ನು ತರಲಿಚ್ಛಿಸುವವರು ಶ್ರೀಮಾತೆಯವರ ಜೀವನದ ಪದರ ಪದರಗಳಲ್ಲಿ ಇದನ್ನು ಕಾಣಬೇಕು. ಆಗ ನಮ್ಮ ಮುಂದಿರುವ ಕತ್ತಲೆಯ ತೆರೆ ಸರಿದು ಅರುಣೋದಯವಾಗುತ್ತದೆ.

ಪಾಶ್ಚಾತ್ಯ ಜೀವನಶೈಲಿಯಲ್ಲಾಗಲಿ ಸನಾತನ ಹಿಂದೂ ಧರ್ಮದ ಜೀವನಶೈಲಿಯಲ್ಲಾಗಲಿ ಇರುವ ಗಟ್ಟಿಕಾಳನ್ನು ಬೊಗಸೆಯಲ್ಲಿ ಹಿಡಿಯದೆ ಜಳ್ಳುಕಾಳನ್ನು ಇರಿಸಿಕೊಂಡು ಅದನ್ನೇ ಗಟ್ಟಿಕಾಳೆಂದು ಭ್ರಮಿಸಿದ್ದೇವೆ. **ಬದುಕು ಭೋಗಕ್ಕಲ್ಲ, ಯೋಗಕ್ಕಾಗಿ** ಎಂಬುದು ಈಗ ನಮಗೆ ಮನವರಿಕೆಯಾಗಬೇಕಾಗಿದೆ. ಲೌಕಿಕ ಅಂತಸ್ತು ಅಧಿಕಾರಗಳನ್ನು ಮೀರಿದ ಬೇರೊಂದು ನೆಲೆಯನ್ನು ಕಾಣುವ ಒಳಗಣ್ಣು ನಮಗೆ ಬೇಕಾಗಿದೆ. **ಮಾನವೀಯತೆ, ದಾನವತೆಯೊಂದಿಗೆ ಬೆರೆತು ಬರಡಾಗಬಾರದು, ದೈವಿಕತೆಯೊಂದಿಗೆ ಸಂಗಮಗೊಂಡು ಹಸನಾಗಬೇಕು.** “ಮಾನವ ಜನ್ಮ ಬಲು ದೊಡ್ಡದು, ಇದ ಹಾನಿ ಮಾಡಲುಬೇಡಿ, ಹುಚ್ಚಪ್ಪಗಳಿರಾ” ಎಂದು ನಮ್ಮ ದಾಸರು ಹೇಳಿದುದನ್ನು ಹೆಜ್ಜೆ ಹೆಜ್ಜೆಗೂ ನೆನೆದು ಬಾಳಿನಲ್ಲಿ ಮುಂದಡಿ ಇಡಬೇಕು. ನಾವು ಶುದ್ಧ ಮಾನವರಾಗಿ ಬಾಳಿ ವಿಶೇಷವಾದ, ಸವಿಯಾದ ನೆನಪುಗಳನ್ನು ಉಳಿಸಬೇಕೆ ಹೊರತು ದಾನವರಾಗಿ ವಿಷದ ನೆನಪು ಉಳಿಸಬಾರದು!

> **“ನೋಡು, ಆಸೆಯು ಎಲ್ಲದಕ್ಕೂ ಮೂಲ. ನನ್ನನ್ನು ನೋಡು, ಇಷ್ಟೊಂದು ವಸ್ತುಗಳ ಮಧ್ಯೆ ಇದ್ದೇನೆ, ಆದರೂ ನನಗೆ ಯಾವ ಆಸೆಯೂ ಇಲ್ಲ, ಒಂದು ಸ್ವಲ್ಪವೂ ಇಲ್ಲ.”** –ಶ್ರೀಶಾರದಾದೇವಿ